# ಪಾಶ್ಚಾತ್ಯ ಚಿಂತನೆಯ ಮೇಲೆ ಭಾರತೀಯ ಪ್ರಭಾವ-೧

❑ ಡಾ. ಎಚ್. ರಾಮಚಂದ್ರಸ್ವಾಮಿ

**ಜಾಗತಿಕ ಜೀವನದ ಮೇಲೆ ಭಾರತೀಯ ಚಿಂತನೆಯ ಪ್ರಭಾವ ಗೋಪ್ಯವಾಗಿ, ನೀರವವಾಗಿ ಅತ್ಯಂತ ಸುಂದರವಾದ ಕುಸುಮಗಳನ್ನು ಅರಳಿಸುವ ಮುಂಜಾನೆಯ ಹಿಮಮಣಿಯಂತೆ, ಹಾಗೂ ಈ ಪ್ರಭಾವವನ್ನು ಅತ್ಯಂತ ಪ್ರಾಚೀನ ದಿನಗಳಿಂದಲೂ ಕಾಣಬಹುದು ಎಂಬ ಸ್ವಾಮಿ ವಿವೇಕಾನಂದರ ಮಹತ್ವವಾದ ಸಿದ್ಧಾಂತವನ್ನು ವಿಸ್ತೃತವಾಗಿ ವಿವರಿಸುವ ಪ್ರಯತ್ನವನ್ನು ಮಾಡಿರುವ ಡಾ.ಎಚ್. ರಾಮಚಂದ್ರಸ್ವಾಮಿಯವರು ಉತ್ತಮ ಚಿಂತಕರೂ, ಬರಹಗಾರರೂ ಆಗಿದ್ದು, ವಿವೇಕಪ್ರಭದ ಓದುಗರಿಗೆ ಚಿರಪರಿಚಿತರು.**

**ಪ**ರಕೀಯ ಪ್ರಭಾವಗಳು ಮತ್ತು ರಾಷ್ಟ್ರೀಯ ಸಂಸ್ಕೃತಿಗಳು ಬೆಸೆದು ಒಂದಾದ ಆಧ್ಯಾತ್ಮಿಕ ಪುನಶ್ಚೇತನಗಳನ್ನೇ ನಾವು ಮಾನವ ಇತಿಹಾಸದ ಮಹತ್ವದ ಘಟ್ಟಗಳು ಎಂದು ಗುರುತಿಸಬಹುದು. ಮಧ್ಯಯುಗೀನ ಯುರೋಪಿಯನ್ ವಿಶ್ವವಿದ್ಯಾನಿಲಯಗಳಲ್ಲಿ ಪುರಾತತ್ತ್ವವೆಂದು ಓದಲು ಇದ್ದುದು ಗ್ರೀಕೋ-ರೋಮನ್ ಹಾಗೂ ಬೈಬಲ್ ಸಂಬಂಧಪಟ್ಟ ಸಾಹಿತ್ಯ ಮಾತ್ರ. ಇಂದು ಇಡೀ ಪ್ರಪಂಚ ಒಂದಾಗಿರುವಾಗ ಇಂಥ ಧೋರಣೆ ಅರ್ಥಹೀನ. ಸಂತ ಪಾಲನ, ಸಾಕ್ರಟೀಸನ ಜೊತೆಗೆ ಈಜಿಪ್ಟಿನ ಪ್ರವಾದಿಗಳು, ಚೈನಾದ ಮಾನವತಾವಾದಿಗಳು, ಭಾರತದ ಋಷಿಗಳು ಸಹ ಅಗತ್ಯವಾಗುತ್ತಾರೆ.

ಧರ್ಮದ ವಿಚಾರದಲ್ಲಿ ಹಿಂದೂವಿನದು ಯಾವಾಗಲೂ ವೈಚಾರಿಕ ನಿಲುವು—ಮಾನವ ಜೀವನದ ಆಳ-ಅಗಲಗಳನ್ನು ವೈಜ್ಞಾನಿಕವಾಗಿ ಅನ್ವೇಷಿಸುವಂಥದು. ಬಾಹ್ಯದ ಭೂಮ ಜ್ಯೋತಿಯೊಂದರೆಡೆಗೆ ಆಕರ್ಷಿತವಾಗಿ ಸಾಗುವ ಪತಂಗವಲ್ಲ; ಬದಲಿಗೆ ತನ್ನೊಳಗೇ ತಾನು ಅನಾವರಣ ಕ್ರಿಯೆಯಿಂದ ಜ್ಯೋತಿಯಾಗುವ ಮಿಣುಕು ಹುಳು. ನಂಬಿಕೆಗಿಂತ ಅನುಭವ, ಸಾಯುಜ್ಯಕ್ಕಿಂತ ಸಾಕ್ಷಾತ್ಕಾರ ಇಲ್ಲಿ ಮುಖ್ಯ. ದೇವರನ್ನೊಪ್ಪದ ಸಾಂಖ್ಯರು, ಜೈನರು, ಬೌದ್ಧರು ಸಹ ಆಧ್ಯಾತ್ಮಿಕ ಪ್ರಜ್ಞೆಯನ್ನು ಒಪ್ಪುವರು; ಭಗವದ್ಭಕ್ತರಾದ ರಾಮಾನುಜರಂಥವರೂ ದೇವರನ್ನು ಕಾಣುವುದು ಆಧ್ಯಾತ್ಮಿಕ ಅನುಭವದ ಮೂಲಕ ಮಾತ್ರ ಸಾಧ್ಯ—**ಆತ್ಮಪ್ರಾಪ್ತಿ ಲಕ್ಷಣಂ ಮೋಕ್ಷಮ್**—ಎನ್ನುತ್ತಾರೆ. ನಂಬಿಕೆ ನಡತೆ ಕರ್ಮಾಚರಣೆ ಸಿದ್ಧಾಂತ ಎಲ್ಲಕ್ಕೂ ಇರುವುದು ಎರಡನೆಯ ಸ್ಥಾನ; ಮೊದಲನೆಯದೇ ಆತ್ಮಾನ್ವೇಷಣೆಯ ಮುಖಾಂತರ ಭಗವಂತನನ್ನು ತಲುಪುವುದು. ಈ ದೈವ ಸಾಕ್ಷಾತ್ಕಾರಕ್ಕಾಗಿ ಹುಟ್ಟುವ ಹಂಬಲವೇ ದೈವಿಕವಾದದ್ದು.

> ಧರ್ಮದ
> ತುಲನಾತ್ಮಕ ಅಧ್ಯಯನ,
> ಪಶ್ಚಿಮವು ಎಲ್ಲವನ್ನೂ ಕೊಡುವುದೇ
> ಹೊರತು ಅದು ಸ್ವೀಕರಿಸುವಂಥದು
> ಏನೂ ಇಲ್ಲ ಎಂದು ಕಲ್ಪಿಸುವವರ
> ಕಣ್ಣು ತೆರೆಯಿಸಿದೆ.
> —ಹ್ಯೂಗ್ ವಾಕರ್
> (Hugh Walker)

ಒಂದೂವಿನ ಈ ನಿಲುವು ಭಾರತೀಯ ಎನ್ನಬಹುದಾದ್ದಕ್ಕಿಂತಲೂ ಪೌರಸ್ತ್ಯದೇಶಗಳ—ಎಂದರೆ ಏಷ್ಯಾದ—ಪ್ರಾತಿನಿಧಿಕ ನಿಲುವು ಎನ್ನಬಹುದು. ಏಷ್ಯಾ-ಯೂರೋಪುಗಳ ಚಿಂತನಾಲಹರಿ ವಿಭಿನ್ನವಾದರೂ ಪರಸ್ಪರ ವಿಚಾರ ವಿನಿಮಯವನ್ನು ದೂರವಿರಿಸುವಷ್ಟು ವಿಭಿನ್ನವೇನಲ್ಲ. ಇಂತಹ ವಿಚಾರ ವಿನಿಮಯ ಶತಮಾನಗಳಿಂದಲೂ ನಡೆದುಕೊಂಡು ಬಂದಿದ್ದು ಮಾನವಮನಸ್ಸಿನ ಏಕತೆಯ ಕಡೆಗೆ ತುಡಿಯುತ್ತ ಬಂದಿದೆ. ಭಾಷೆ, ಜನಾಂಗೀಯ ಹಾಗೂ ಭೌಗೋಳಿಕ ಭಿನ್ನತೆಗಳಾವುವೂ ಇದಕ್ಕೆ ಅಡ್ಡಿಯಾಗಿಲ್ಲ. ಐರೋಪ್ಯ ಪ್ರಜ್ಞೆ ಗ್ರೀಕ್ ಹಾಗೂ ರೋಮನ್ ಸಂಸ್ಕೃತಿಗಳ ಪ್ರಭಾವದಿಂದ ಅರಳುತ್ತಿದ್ದಂತೆಯೇ, ಏಷ್ಯಾದ—ಅದರಲ್ಲೂ ಭಾರತದ—ಪರಂಪರಾಗತ ಪ್ರಭಾವದಿಂದ ಅದರ ಅಂತಶ್ಚೇತನವೂ ಸಹ ಅರಳತೊಡಗಿತು. ಮಾನವ ಇತಿಹಾಸದಲ್ಲಿ ಮೊದಲ ಬಾರಿಗೆಂಬಂತೆ ವಿಶ್ವವೆಲ್ಲಾ ಒಂದೇ ಎಂಬ ಭಾವ ಸಂಚಾರವುಂಟಾಯಿತು. ಮುಂದೆಂದೂ ಬೇರ್ಪಡದಂತೆ ಇಡೀ ಪ್ರಪಂಚ ಒಂದಾಯಿತು. ಮಾನವ ಮನಸ್ಸಿನ ಅಷ್ಟೈಶ್ವರ್ಯಗಳನ್ನು ಎಲ್ಲರೂ ಹಂಚಿಕೊಳ್ಳುವಂತಾಯಿತು. ವಿಶ್ವಭಾವನೆಯ, ಪರಿಪೂರ್ಣತೆಯ, ಆತ್ಮಗೌರವ ತನ್ನದಾಗಬೇಕಾದರೆ, ಪೌರಸ್ತ್ಯ-ಪಾಶ್ಚಾತ್ಯ ಸಾಂಸ್ಕೃತಿಕ ವಿನಿಮಯ ಅತ್ಯಗತ್ಯವೆಂಬುದು ಮಾನವನಿಗೆ ಇಂದು ಮನದಟ್ಟಾಗಿದೆ. ಎಲ್ಲಿ ಯಾರು ವೈಜ್ಞಾನಿಕ ಆವಿಷ್ಕಾರವನ್ನೋ ಆಧ್ಯಾತ್ಮಿಕ ಪ್ರಕಾಶವನ್ನೋ ಸಾಧಿಸಿದರೂ ಅದು ತತ್‌ಕ್ಷಣವೇ ಸಮಸ್ತ ಮಾನವರಿಗೂ ಸೇರಿದ ಆಸ್ತಿಯಾಗುವಂತಾಗಿದೆ. ಸಂಸ್ಕೃತಿಗಳು ಪರಸ್ಪರ ಬೆರೆತು ಒಂದಾಗುವ ನಿಟ್ಟಿನಲ್ಲಿ ಮಾನವನ ಚೈತನ್ಯಪ್ರವಾಹ ಹರಿಯುತ್ತಿದೆ.

ಮಾನವ ಜೀವನದ ವಿಶಿಷ್ಟ ಶೈಲಿಯೊಂದು ಸಂಸ್ಕೃತಿಯಾಗಿ ಹರಳುಗಟ್ಟಬೇಕಾದರೆ ಕೋಟಿಗಟ್ಟಲೆ ಜನರ ಚಿಂತನೆ, ಕನಸು, ಅನುಭವ ಪರಾಕಾಷ್ಠೆಗಳೆಲ್ಲ ಧರ್ಮದ ರೂಪ ತಾಳಬೇಕು; ಧರ್ಮವು ಅವುಗಳ ಧಾರಕ ಶಕ್ತಿಯಾಗಿ ನಿಲ್ಲಬೇಕು, ಸಂಸ್ಕೃತಿಯನ್ನಾಗಿಸಬೇಕು. ಲೋಕಧರ್ಮಗಳು ಈ ಕ್ರಿಯೆಯಲ್ಲಿ ಭಾರತದ ನೆರವನ್ನು ಪಡೆಯುತ್ತಲೆ ಬಂದಿವೆ. ಮೂಢನಂಬಿಕೆಗಳ, ದೈವ ತತ್ತ್ವವಾದಗಳ ಭರಾಟೆಯ ನಡುವೆಯೂ ಭಾರತವು ಅಂತಶ್ಚೇತನದ ಆದರ್ಶವನ್ನು ಎತ್ತಿಹಿಡಿಯಲು ಯಾವಾಗಲೂ ನೆರವಾಗಿದೆ. ತಮ್ಮ *Story of Civilization: Our Oriental Heritage* ಗ್ರಂಥದಲ್ಲಿ ವಿಲ್ ಡ್ಯೂರಾಂಟ್ ಹೇಳುತ್ತಾರೆ:

"ದುರ್ಗಮವಾದ ಹಿಮಾಲಯದ ಮೂಲಕವೂ ಭಾರತ ನಮಗೆ ತರ್ಕ-ವ್ಯಾಕರಣಗಳ, ತತ್ತ್ವ-ಪುರಾಣಕಥೆಗಳ, ಚದುರಂಗ-ಸಮ್ಮೋಹನಗಳ, ದಶಮಾನ ಸಂಖ್ಯಾಪದ್ಧತಿಯ ಉಡುಗೊರೆಗಳನ್ನು ಕಳುಹಿಸಿಕೊಟ್ಟಿದೆ. ಆದರೆ ಇವೇನೂ ಭಾರತದ ಚೈತನ್ಯ ಸಾರವಲ್ಲ. ಸಂಶೋಧನೆ, ಕೈಗಾರಿಕೋದ್ಯಮ ವ್ಯಾಪಾರಗಳು ಖಂಡಾಂತರಗಳನ್ನು ಒಂದಾಗಿ ಬೆಸೆದಂತೆಲ್ಲ ಏಷ್ಯಾದೊಂದಿಗೆ ನಮಗೆ ವಿರಸವೇರ್ಪಡುತ್ತದೆ. ಆ ವಿರಸದ ನಡುವೆಯೇ ಅಲ್ಲಿಯ ನಾಗರಿಕತೆಯ ಪರಿಚಯ ನಮಗಾಗುತ್ತದೆ. ನಮ್ಮ ದುರಹಂಕಾರ ದೌರ್ಜನ್ಯ ಆಕ್ರಮಣಶೀಲತೆಗಳಿಗೆ ಪ್ರತಿಯಾಗಿ, ದುರ್ಜಯವಾದ ಆತ್ಮದ ನೆಲೆಯಿಂದ ಭಾರತವು ನಮಗೆ ಪ್ರಬುದ್ಧ ಮನಸ್ಸಿನ ಮೃದುತ್ವ, ತಾಳ್ಮೆ, ಸಹನಶೀಲತೆಗಳನ್ನು, ಆಧ್ಯಾತ್ಮಿಕ ಶಾಂತಿಯನ್ನು, ಎಲ್ಲವನ್ನೂ ಒಂದಾಗಿಸುವ ಸಮಸ್ತ ಜೀವಿಗಳ ಮೇಲಣ ಪ್ರೀತಿಯನ್ನು ಕಲಿಸುತ್ತದೆ" (ಪು.೬೩೩).

ಹಿಂದೂ ನಾಗರಿಕತೆಯ ಮೂಲ ಹರಪ್ಪ-ಮೊಹೆಂಜೊದಾರೊ ಉತ್ಖನನಗಳಿಂದ ವ್ಯಕ್ತವಾಗಿರುವ ಸಿಂಧೂ ನದೀತೀರದ ಸಂಸ್ಕೃತಿಯವರೆಗೂ ಹೋಗುವುದು. ಇವು ಒಳ್ಳೇ ಸ್ನಾನಘಟ್ಟಗಳು ಚರಂಡಿಗಳು ಮುಂತಾದುವನ್ನು ಒಳಗೊಂಡ, ಉತ್ತಮ ಪೂರ್ವಯೋಜಿತ ನಗರಗಳು. ಪರಸ್ಪರ ನಾನೂರು ಮೈಲಿ ದೂರವಿದ್ದರೂ ಇವೆರಡರಲ್ಲಿ ವ್ಯಕ್ತವಾಗುವ ನಾಗರಿಕತೆ ಅಚ್ಚರಿಯೆಂಬಂತೆ ಒಂದೇ ಆಗಿದೆ. ಇವುಗಳ ಕ್ಷೇತ್ರ ಈಜಿಪ್ಟ್ ರಾಜ್ಯದ ಎರಡರಷ್ಟು, ಅಥವಾ ಸುಮೇರ್-ಅಕ್ಕಡ್‌ನ ಸುಮಾರು ನಾಲ್ಕರಷ್ಟು, ಎಂದು ಚೈಲ್ಡ್ ಅಭಿಪ್ರಾಯ ಪಡುತ್ತಾರೆ (*New Light on the Most Ancient East*, p.206). ಇಲ್ಲಿನ ನಾಗರಿಕತೆ ಕ್ರಿ.ಪೂ. ೪೦೦೦ಕ್ಕಿಂತಲೂ ಹಿಂದಿನದು. ಆಗಲೇ ಉತ್ತಮ ಶಿಲ್ಪದ ಪೂರ್ವಯೋಜಿತ ನಗರರಚನೆ, ವ್ಯವಸಾಯ, ಪಶುಪಾಲನೆ ಆನೆಕುದುರೆಗಳ ಬಳಕೆ, ಎತ್ತಿನ ಗಾಡಿಗಳು, ತಾಮ್ರ, ಕಂಚು, ಬೆಳ್ಳಿಗಳ ಹೊಳಪಿನ ಪಾತ್ರೆಗಳು, ಒಂದು ರೀತಿಯ ಚಿತ್ರ ಬರಹ—ಎಲ್ಲವೂ ತಿಳಿದಿತ್ತು ಎಂಬುದಕ್ಕೆ ಆಧಾರಗಳಿವೆ. ಮುಖ್ಯಾಂಶಗಳಲ್ಲಿ ಈ ನಾಗರಿಕತೆ ಸುಮೇರ್, ಈಜಿಪ್ಟ್, ಮಿನೋಸ್‌ಗಳಲ್ಲಿದ್ದ ನಾಗರಿಕತೆಯನ್ನೆ ಹೋಲುತ್ತದೆ. ಹರಪ್ಪ ಮೊಹೆಂಜೊದಾರೊ ತಜ್ಞ ಸರ್ ಜಾನ್ ಮಾರ್ಷಲ್ ಪ್ರಕಾರ ಈ ನಾಲ್ಕು ನಾಗರಿಕತೆಗಳೂ ಒಂದೇ ಮೂಲದವು; ಅವುಗಳಲ್ಲಿ ಕಂಡುಬರುವ ಚಿತ್ರಚಿಹ್ನೆಗಳ ಅಭಿವ್ಯಕ್ತಿ, ನೂಲುವ, ನೇಯ್ಗೆಯ ಬಗೆಗಿನ ಜ್ಞಾನ, ವರ್ಣರಂಜಿತ ಸುಟ್ಟ ಮಣ್ಣಿನ ಪಾತ್ರೆಗಳು ಎಲ್ಲ ಒಂದೇ ಬಗೆಯಾಗಿವೆ. "ಸಿಂಧೂ ನದೀ ನಾಗರಿಕತೆಯಂತೂ ವಾತಾವರಣಕ್ಕೆ ವಿಶಿಷ್ಟವಾಗಿ ಹೊಂದಿಕೊಂಡ ಮಾನವ ಜೀವನಕ್ರಮವನ್ನು ಎತ್ತಿತೋರಿಸುತ್ತದೆ; ನವಯುಗದ ಭಾರತೀಯ ಸಂಸ್ಕೃತಿಗೆ ಇದೇ ಆಧಾರವೆನ್ನಿಸುವಷ್ಟು ಭಾರತೀಯವಾಗಿದೆ" ಎನ್ನುತ್ತಾರೆ ತಜ್ಞರಾದ ಚೈಲ್ಡ್ (ಅದೇ, ಪು. ೨೨೦).

> ಧಾರ್ಮಿಕ ಚಿಂತನೆ ಮತ್ತು ಭಾವನೆಗಳನ್ನು ವ್ಯಕ್ತಪಡಿಸುವ ಪ್ರಥಮ ಪ್ರಯತ್ನ ವೇದದಲ್ಲಿ ಅಡಕವಾಗಿದೆ. ಧರ್ಮವಿಜ್ಞಾನಕ್ಕೆ ಸಂಬಂಧಿಸಿದಂತೆ ಅತ್ಯಂತ ಜಟಿಲ ಸಮಸ್ಯೆಗಳನ್ನು ಬಗೆಹರಿಸಲು ಅದು ಮಾತ್ರ ನಮಗೆ ಸಹಾಯ ಮಾಡಬಲ್ಲದು.
>
> —ಮ್ಯಾಕ್ಸ್ ಮುಲ್ಲರ್

ಆ ಜನರ ಸಾಮಾಜಿಕ, ಧಾರ್ಮಿಕ ಜೀವನದ ಬಗ್ಗೆ ಕೇವಲ ಊಹಿಸಬಹುದಷ್ಟೇ. ಆದರೂ, ಲಭ್ಯವಿರುವ ಶಿಲ್ಪಗಳು ಶಿವ ಹಾಗೂ ಶಕ್ತಿಯ ಉಪಾಸನೆ ಮತ್ತು ಯೋಗವಿಧಾನಗಳು ಅವರಿಗೆ ಗೊತ್ತಿದ್ದವು ಎಂದು ತೋರಿಸಿಕೊಡುತ್ತವೆ. ಇಂಥವೇ ಬಹುದೈವಿಕ ಆರಾಧನೆಗಳು ಮತ್ತು ಮಾನಸಿಕ ಉನ್ನತಿಯ ತಂತ್ರಗಳನ್ನು ಈಜಿಪ್ಟ್‌ನ ಹರ್ಮೆಟಿಕ್ ಗುಂಪುಗಳಲ್ಲೂ ಕಾಣಬಹುದಾಗಿದೆ. ಬಹುದೈವಿಕ ಆರಾಧನೆ, ಯೋಗಪರಿಪೂರ್ಣತೆ, ಜನಾಂಗಗಳ ನಡುವಣ ಸಾಮರಸ್ಯ—ಇವುಗಳನ್ನು ಎಲ್ಲೆಲ್ಲೂ ಕಾಣಬಹುದಾಗಿದೆ. ಈ ಸಂಸ್ಕೃತಿಗೂ ಸುಮೇರ್ ಸಂಸ್ಕೃತಿಗೂ ನೇರ ಸಂಬಂಧವಿದ್ದು, ಅದೇ ಬ್ಯಾಬಿಲೋನಿಯಾ ಸಂಸ್ಕೃತಿಯಾಗಿ ಪರಿಣಮಿಸಿತು; ಮುಂದೆ ಯೂರೋಪಿನ ಸಂಸ್ಕೃತಿಗೂ ಮೂಲವಾಯಿತು.

ಹಿಂದೂ ಸಂಸ್ಕೃತಿಯ ಎರಡನೆಯ ಹಂತವೇ ಋಗ್ವೇದದ ಕಾಲ—ಸುಮಾರು ಕ್ರಿ.ಪೂ.೨೦೦೦ಕ್ಕಿಂತಲೂ ಹಳೆಯದು. ಇಲ್ಲಿ ನಾವು ಭಾಷೆ-ಪುರಾಣಕಥೆಗಳು, ಧಾರ್ಮಿಕ ಸಂಪ್ರದಾಯಗಳು ಮತ್ತು ಸಾಮಾಜಿಕ ಸಂಸ್ಥೆಗಳು—ಇವುಗಳ ವಿಚಾರದಲ್ಲಿ ಗ್ರೀಕರ, ರೋಮನರ, ಕೆಲ್ಟರ, ಜರ್ಮನರ, ಸ್ಲಾವ್ ಜನರ ಹಾಗೂ ಭಾರತೀಯ-ಇರಾನಿಯರ ನಡುವೆ ಸಾಮ್ಯವಿರುವುದನ್ನು ಕಾಣುತ್ತೇವೆ. ಸ್ವರ್ಗದ ದೇವತೆ ದ್ಯೌಸ್ಪಿತರ್ (ಜ್ಯೂಪಿಟರ್), ಪೃಥ್ವೀ, ವರುಣ, ಮುಂಬೆಳಗಿನ ಉಷಸ್ (ಅರೋರಾ), ಸೂರ್ಯ —ಈ ಪ್ರಕೃತಿ ದೇವತೆಗಳು ಗ್ರೀಕರಿಗೂ ಭಾರತೀಯರಿಗೂ ಸಮಾನವಾದುವುಗಳು. ಗ್ರೀಕರ ಒಲಂಪಿಯನ್ ಹಾಗೂ ವೈದಿಕ ನಂಬಿಕೆಗಳು ಒಂದೇ ಹಿನ್ನೆಲೆಯುಳ್ಳವು; ಹೋಮರನ ಕಾವ್ಯಗಳಲ್ಲಿ ಬಿಂಬಿತವಾಗಿರುವ ಸಾಮಾಜಿಕ ಜೀವನಕ್ಕೂ ವೇದಕಾಲದ ಸಾಮಾಜಿಕ ಜೀವನಕ್ಕೂ ಅಚ್ಚರಿಯೆಂಬಷ್ಟು ಹೋಲಿಕೆ ಇದೆ. ಎರಡರಲ್ಲೂ ಇರುವುದು ಗುಂಪಿನ ಯಜಮಾನನ ನಿರ್ದೇಶನದಂತೆ ನಡೆಯುವ ಕಟ್ಟುನಿಟ್ಟಾದ ಸಮಾಜವ್ಯವಸ್ಥೆ. ಇದರಿಂದ ಈ ಎರಡು ಜನಾಂಗಗಳ ನಡುವೆ ಸಂಸ್ಪರ್ಶ, ಪರಸ್ಪರ ಪ್ರಭಾವ ಇದ್ದಿರಲೇಬೇಕೆಂದು ಊಹಿಸಬಹುದು. ಮ್ಯಾಕ್ಸ್ ಮುಲ್ಲರ್ ಮಹಾಶಯನಂತೂ "ನಾವು ಚಿಂತನೆಯಲ್ಲಿ, ಅಭಿವ್ಯಕ್ತಿಯಲ್ಲಿ ಎಷ್ಟರಮಟ್ಟಿಗೆ ಆರ್ಯರಾಗಿರುವೆವೋ ಅಷ್ಟೂ ಮಟ್ಟಿಗೆ ಋಗ್ವೇದವೇ ನಮ್ಮ ಅತ್ಯಂತ ಪುರಾತನ ಆಧಾರಗ್ರಂಥ" ಎಂದು ಹೇಳಿಬಿಟ್ಟಿದ್ದಾನೆ (Kaegi, *The Rig Veda*, p.25). ಆದರೆ, ಕಾರಣಾಂತರಗಳಿಂದ ಪ್ರಾಚ್ಯ ಪಾಶ್ಚಾತ್ಯ ಜನರು ಪ್ರತ್ಯೇಕವಾದ ಮೇಲೂ ಎಷ್ಟೋ ಕಾಲದವರೆಗೆ ಭಾರತೀಯರೂ ಇರಾನಿಯರೂ ಒಟ್ಟಿಗಿದ್ದರು; ಋಗ್ವೇದದ ವರುಣನೇ ಅವರ ಪ್ರಬಲ ದೇವತೆಯಾಗಿದ್ದನು; ತನ್ನ 'ಋತ'ದ ಬಲದಿಂದ ಅವನು ಮೂರು ಲೋಕಗಳ ಒಡೆಯನಾಗಿದ್ದನು. ನೈತಿಕ ವ್ಯವಸ್ಥೆಯ ಹರಿಕಾರನಾಗಿದ್ದ ಅವನ ಕಣ್ತಪ್ಪಿಸಿ ನಡೆಯುವುದು ಯಾರಿಗೂ ಸಾಧ್ಯವಿರಲಿಲ್ಲ.

ವೇದಗಳಲ್ಲಿನ ವರುಣನೂ ಇರಾನಿಯರ ಅವೆಸ್ತಾದಲ್ಲಿನ ಅಹುರನೂ ಒಂದೇ ಗುಣಲಕ್ಷಣವುಳ್ಳವರು. ಜರತುಷ್ಟ್ರ ಧರ್ಮದಲ್ಲಿಯೂ ಮಿತ್ರ-ವರುಣನ ಕಲ್ಪನೆಯಿದೆ; ಅಹುರಮಜ್ದಾ ಅವನನ್ನು ಜಗತ್ತನ್ನು ನೋಡಿಕೊಂಡಿರುವಂತೆ ನಿಯಮಿಸಿದ್ದಾನೆ. ಪುರಾತನ ಗ್ರೀಸ್‌ನಲ್ಲೂ ಮಿತ್ರ ಸಾಕಷ್ಟು ಪರಿಚಿತನೇ. ಅಲ್ಲಿ ಅವನು ಆರ್ಮುಜ್ (ಬೆಳಕು) ದೇವತೆ ಮತ್ತು ಅಹ್ರಿಮನ್ (ಕತ್ತಲೆ)—ಈ ಇಬ್ಬರ ನಡುವಣ ಮಧ್ಯಸ್ಥಿಕೆಗಾರ. ಕಾಲಕ್ರಮದಲ್ಲಿ ಅಹುರಮಜ್ದಾ ಸ್ಯೂಸ್ ದೇವತೆಯಲ್ಲೂ ಮಿತ್ರನು ಹೀಲಿಯೋಸ್ ದೇವತೆಯಲ್ಲೂ ಒಂದಾದರು. ಕ್ರಿಸ್ತನ ಉಗಮವಾಗುತ್ತಿದ್ದಂತೆ ಮಿತ್ರನ ಕೀರ್ತಿ ರೋಮನ್ ಚಕ್ರಾಧಿಪತ್ಯಕ್ಕೂ ಹರಡಿತು; ಅವನಿಗೂ ಮಹಾತಾಯಿ ಐಸಿಸ್ ದೇವತೆಗೂ ನಂಟು ಬೆಳೆಯಿತು. ಅನೇಕ ರೋಮನ್ ಯುದ್ಧಗಳು ಮಿತ್ರನ ಹೆಸರಿನಲ್ಲಿ ಗೆಲ್ಲಲ್ಪಟ್ಟವು; ಅವನು ರೋಮನರ ಪಾಲಿಗೆ 'ರಾಜ್ಯರಕ್ಷಕ' ನಾದ.

> ಭಾರತೀಯ
> ಜ್ಞಾನವೃಕ್ಷದಲ್ಲಿ
> ಉಪನಿಷತ್ತುಗಳಿಗಿಂತ ಶ್ರೇಷ್ಠವಾದ
> ಹೂವು ಬೇರೊಂದಿಲ್ಲ, ಮತ್ತು
> ವೇದಾಂತಕ್ಕಿಂತ ಸ್ವಾದ್ಯವಾದ
> ಹಣ್ಣು ಇನ್ನೊಂದಿಲ್ಲ.
> —ಪಾಲ್ ಡಾಯ್ಸನ್
> (Paul Deusen)

ಬುದ್ಧನಿಗಿಂತಲೂ ಹಿಂದಿನ (ಕ್ರಿ.ಪೂ. ೯೦೦-೬೦೦) ಉಪನಿಷತ್ತುಗಳ ಕಾಲವೇ ಹಿಂದೂ ಸಂಸ್ಕೃತಿಯ ಮೂರನೆಯ ಹಂತ. ಇಂದಿಗೂ ಪ್ರಸಕ್ತವಾಗಿರುವ ಹಿಂದೂ ಚಿಂತನೆಯ ಮುಖ್ಯಾಂಶಗಳು ಹರಳುಗಟ್ಟಿದ್ದೇ ಆಗ. ಆತ್ಮನನ್ನು ಅರಿಯಲು ಯತ್ನಿಸುವುದೇ ಉತ್ತಮೋತ್ತಮ ವಿವೇಕ. ಆತ್ಮನೆಂದರೆ ಮೂಲಭೂತ ಅಂತಶ್ಚೇತನ, ದೇಹ ಮನಸ್ಸುಗಳ ಸ್ಥಿತಿಗತಿಗಳಿಗಿಂತ ಭಿನ್ನವಾದ ಶುದ್ಧ ಪ್ರಜ್ಞೆ. ವಿಶ್ಲೇಷಣೆಯ ಮೂಲಕ ಆತ್ಮ-ಅನಾತ್ಮಗಳ ನಡುವಣ ವ್ಯತ್ಯಾಸವನ್ನು ಗುರುತಿಸಬಹುದು. ಜೀವನದ ಎಲ್ಲ ಹಂತಗಳಲ್ಲಿಯೂ ಬದಲಾಗದೆ ನಿಲ್ಲುವುದು ಆತ್ಮ ಒಂದೇ. ಬದಲಾಗುವ ದೇಹವಾಗಲಿ, ದ್ವಂದ್ವಗಳಿಗೆ ಒಳಗಾಗುವ ಮನಸ್ಸಾಗಲಿ ಆತ್ಮವಲ್ಲ. ಜಾಗ್ರತ್-ಸ್ವಪ್ನ-ಸುಷುಪ್ತಿ ಅವಸ್ಥೆಗಳೂ ಆತ್ಮವಲ್ಲ; ಇವನ್ನು ಮೀರಿದ ಅತೀತಪ್ರಜ್ಞೆಯ ತುರೀಯಾವಸ್ಥೆಯಲ್ಲಿ ಆತ್ಮನ ಅನುಭವ ಆಗುವುದು. ಪ್ರಪಂಚದ ಯಾವುದರೊಂದಿಗೂ ತಳುಕು ಹಾಕಲಾಗದ್ದು ಎನ್ನುವುದು ಆತ್ಮನ ಬಗೆಗಿನ ಜ್ಞಾನ; ದೇಶ ಕಾಲಗಳಿಗೂ ಅತೀತವಾದ ಅದು ನಮ್ಮೊಳಗಿನ ಸಾರ ಸ್ವರೂಪವೇ ಆಗಿದೆ ಎಂಬ ಅನುಭವವೇ ಆತ್ಮಜ್ಞಾನ. ಬ್ರಹ್ಮಜ್ಞಾನವೂ ಅದೇ. ಏಕೆಂದರೆ ದೇಶಕಾಲಾತೀತವಾದ ವಿಶ್ವದ ಸಾರವೂ ಅದೇ. ಪರಾವಿದ್ಯೆಗೆ ತಪಸ್ಸು ಅತ್ಯಾವಶ್ಯಕ. ಮುಕ್ತಿ ಹೊಂದಿ ಗಂತವ್ಯದ ಸಾಕ್ಷಾತ್ಕಾರವಾಗುವವರೆಗೂ ಪುನರ್ಜನ್ಮ ಮಾನವನ ಕರ್ಮಗಳಿಂದಲೇ ಉಂಟಾಗತಕ್ಕದ್ದು.

ಈ ದೃಷ್ಟಿ ಮೊದಲಿನಿಂದಲೂ ಪಾಶ್ಚಾತ್ಯ ಚಿಂತನೆಯ ಮೇಲೆ ಪ್ರಭಾವ ಬೀರುತ್ತಲೇ ಬಂದಿದೆ. ಗ್ರೀಸ್‌ನಲ್ಲಿ ಹೋಮರನ ಸಾಂಪ್ರದಾಯಿಕ ಧರ್ಮವನ್ನು ನಿರಾಕರಿಸಿ ತಾತ್ತ್ವಿಕ ಮುಕ್ತ ಚಿಂತನೆ ಪ್ರಾರಂಭವಾದುದು ಈ ಕಾಲದಲ್ಲೇ ಎನ್ನಬಹುದು. ಕ್ರಿ.ಪೂ. ಆರನೆಯ ಶತಮಾನದ ಹೊತ್ತಿಗೆ ಭಾರತ-ಗ್ರೀಸ್‌ಗಳ ನಡುವೆ ರಾಜತಾಂತ್ರಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬಾಂಧವ್ಯಗಳು ಬಲಗೊಂಡಿದ್ದವು. ಬ್ಯಾಬಿಲಾನ್ ಸೋತು ಪರ್ಷಿಯಾ ತಲೆಯೆತ್ತಿದುದೂ, ಡೇರಿಯಸ್ ದಂಡೆತ್ತಿ ಬಂದು ಸಿಂಧೂ ಕಣಿವೆಯನ್ನು ವಶಪಡಿಸಿಕೊಂಡುದೂ ಈ ಕಾಲದಲ್ಲೇ. ಮಧ್ಯ ಯೂರೋಪಿನಿಂದ ಸಿಂಧೂ ಕಣಿವೆಯವರೆಗೆ ಸಾಮ್ರಾಜ್ಯ ಸ್ಥಾಪನೆ ಮಾಡಿಕೊಂಡಿದ್ದ ಇರಾನಿಯರೂ 'ವೈದಿಕ'ರೆನಿಸಿದ್ದ ಆರ್ಯರೂ ದಾಯಾದಿ ಸಂಬಂಧವುಳ್ಳವರೇ ಆಗಿದ್ದರು. ಜ್ಞಾತಿಗಳ ನಡುವಣ ಆದರ್ಶ-ಹಿತಾಸಕ್ತಿಗಳು ಮುಂದೆ ಅಲೆಗ್ಸಾಂಡರನ ದಂಡಯಾತ್ರೆಯವರೆಗೂ ಬಲಗೊಂಡವು. ಉತ್ತರ ಭಾರತವು ಪರ್ಷಿಯಸ್ ಆಳ್ವಿಕೆಗೊಳಪಟ್ಟ ಕಾಲದಲ್ಲೆ ಭಾರತೀಯರಿಗೆ ಗ್ರೀಕ್ 'ಯವನ'ರ ಪರಿಚಯವಿದ್ದಿತು. (ಪಾಣಿನಿಯ ಬರಹಗಳಲ್ಲೂ ಅಶೋಕನ ಶಾಸನಗಳಲ್ಲೂ ಈ ಬಗ್ಗೆ ಉಲ್ಲೇಖವಿದೆ.) ಭಾರತ ಹಾಗೂ ಪರ್ಷಿಯಾದೊಂದಿಗೆ ಸಂಪರ್ಕವಿದ್ದ ಗ್ರೀಕರೇ ಮೊದಲ ಬಾರಿಗೆ ಹೋಮರನ ಪರಗತಿ ಶಾಸ್ತ್ರವನ್ನು ಪ್ರಶ್ನಿಸಿ ಮಾನವ ಜೀವನದ ಅರ್ಥ ಇನ್ನೂ ಹೆಚ್ಚು ಸ್ಫುಟವಾಗಬೇಕೆಂದು ಬಂಡೆದ್ದುದು. ಸಾಕ್ರಟೀಸನಿಗಿಂತ ಹಿಂದಿನವರಾದ ಅನಾಕ್ಸಾಗೋರಸ್ ಮುಂತಾದವರ ಬೋಧನೆಗಳಿಗೂ, ಸತ್ಯಸ್ವರೂಪದ ಬಗೆಗಿನ ಉಪನಿಷತ್ತುಗಳ ಹಾಗೂ ಸಾಂಖ್ಯದ ನಿಲುವಿಗೂ ಬೇಕಾದಷ್ಟು ಸಾಮ್ಯವಿದೆ. ಇವರುಗಳು ಸ್ವತಂತ್ರವಾಗಿಯೇ ಇಂತಹ ನಿಲುವನ್ನು ತಳೆದಿರಬಹುದೆಂಬ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ.

ಗೂಢಗುಹ್ಯತಾ ಪಂಥಗಳು, ಪೈಥಾಗೋರಸ್ ಪ್ಲೇಟೋರಂಥವರ ಬೋಧನೆಗಳು ಪ್ರಾಚೀನ ಗ್ರೀಕ್ ಸಂಪ್ರದಾಯಕ್ಕೆ ವಿರೋಧವಾಗಿವೆಯೆಂದೇ ನೀತ್ಸೆಯಂಥವರ ಅಭಿಪ್ರಾಯ. ಪ್ಲೇಟೋ ತನ್ನ 'ಫೀಡ್ರಸ್'ನಲ್ಲಿ ಗ್ರೀಕ್ ಐತಿಹಾಸಿಕ ಪ್ರವಾದಿ ಆರ್ಫಿಯಸ್‌ನ (ರಹಸ್ಯದೈವವಾದ, ಬದುಕಿನ ನೀತಿನಿಯಮಗಳು, ಪ್ರಾಯಶ್ಚಿತ್ತ ವಿಧಾನಗಳು ಮುಂತಾದುವನ್ನು ಒಳಗೊಂಡ) ಪಂಥದ ಕುರಿತು ಹೇಳುತ್ತಾನೆ. ಡಯಾನಿಸಸ್ ಈ ಪಂಥದ ದೇವರು. ಅಮರ ಆತ್ಮದಲ್ಲಿ ನಂಬಿಕೆ ಆರ್ಫಿಯನ್ ಪಂಥದ ವೈಶಿಷ್ಟ್ಯ. ಭಾವಸಮಾಧಿಯಲ್ಲಿ ಈ ಆತ್ಮ ದೇಹದಿಂದ ಹೊರಬಂದು ತನ್ನ ನಿಜಸ್ವರೂಪವನ್ನು ತೋರಿಸಿಕೊಡುತ್ತದೆ. ಉಪಾಸಕರನ್ನು ದೈವಿಕತೆ ತಾತ್ಕಾಲಿಕವಾಗಿಯಾದರೂ ಆವರಿಸಿಕೊಳ್ಳುತ್ತದೆ. ಅಂತಹ ಕ್ಷಣಗಳಲ್ಲಿ ನಾವು ದೇವರಾಗುವುದು ಖಂಡಿತ. ಆದರೆ ಆತ್ಮ ದೇಹದೊಳಕ್ಕೆ ಹುದುಗಿಕೊಂಡ ಕೂಡಲೇ ಈ ದೈವಿಕತೆ ಹೊರಟುಹೋಗುತ್ತದೆ. ದೇವರಿಗೂ ಆತ್ಮನಿಗೂ ನಡುವೆ ದಾಟಲಾಗದ ಕಂದಕವೇನೂ ಇಲ್ಲ. ದೈವಿಕವಲ್ಲದ ವಸ್ತುಗಳಿಂದ ಆತ್ಮನನ್ನು ಮುಕ್ತಗೊಳಿಸುವುದೇ ಆರ್ಫಿಯನ್ ಧರ್ಮದ ಧ್ಯೇಯ.

ಆತ್ಮನು ವ್ಯಕ್ತಿಯ ಅಸ್ಪಷ್ಟ ಛಾಯೆ ಎಂಬ ಹೋಮರನ ಕಲ್ಪನೆಗಿಂತ ಇದು ಎಷ್ಟೋ ಮೇಲ್ಮಟ್ಟದ್ದಲ್ಲವೆ? ಆದರೆ ಮಾನವ ದೇವರಾಗುವುದು ಎಂದರೆ ಸಾಂಪ್ರದಾಯಿಕ ಗ್ರೀಕ್ ಚಿಂತಕರಿಗೆ ದುರಹಂಕಾರದ ಪರಮಾವಧಿ ಎನ್ನಿಸದಿರದು.

ಆತ್ಮನ ಭವಿಷ್ಯವೇನು ಎಂಬುದಕ್ಕಿಂತ ಆರ್ಫಿಯನ್ ಧರ್ಮ ಒತ್ತು ಕೊಡುವುದು ಮಾನವನ ಪರಿಪೂರ್ಣ ಋಜು ಜೀವನಕ್ಕೆ ಮಾತ್ರವೇ. ಸುಪ್ತವಾಗಿರುವ ದೈವಿಕತೆ ಹೊರಬರುವುದಕ್ಕೆ ಇದು ಸಾಧನೆ. ಋಷಿಸದೃಶ ತಪಸ್ವೀ ಜೀವನ—ಕಾಳು, ಮಾಂಸಾಹಾರ ಇತ್ಯಾದಿಗಳನ್ನು ವರ್ಜಿಸುವುದು, ಸರಳ ಉಡುಪು, ಪ್ರಾಣಿಹತ್ಯೆಯ ಕರ್ಮಗಳಿಂದ ದೂರವಿರುವುದು, ಮದುವೆಯ ಪಾವಿತ್ರ್ಯದಿಂದ ದೈವಶಿಶುವಿನ ಜನನ—ಆರ್ಫಿಯನ್ ಧರ್ಮದ ಈ ಆಚರಣೆಗಳೇ ಮುಂದೆ ಕ್ರೈಸ್ತ ಕರ್ಮಾಚರಣೆಗಳಿಗೆ ದಾರಿಮಾಡಿಕೊಟ್ಟಿರಬಹುದು. ಆರ್ಫಿಯನ್ ಪಂಥ ಮಾನವರೆಲ್ಲರನ್ನೂ ಸೋದರರೆಂದು ಒಳಗೊಳ್ಳುವುದು ಮಾತ್ರವಲ್ಲ, ಸಮಸ್ತ ಜೀವಿಗಳನ್ನೂ ಒಳಗೊಳ್ಳುತ್ತದೆ. ಜೀವವೆಲ್ಲ ಒಂದೇ, ದೇವರು ಒಬ್ಬನೇ ಎನ್ನುತ್ತದೆ. ಸಾಂಪ್ರದಾಯಿಕ ಗ್ರೀಕರ ವಿವಿಧ ಮಾನವರೂಪೀ ದೇವತೆಗಳ ಕಲ್ಪನೆಗಿಂತ ತೀರ ಭಿನ್ನವಾದದ್ದು ಇದು. ಆರ್ಫಿಯನ್ ವಿಶ್ವಸೃಷ್ಟಿ ಕಲ್ಪನೆಯಾಗಲಿ ಪರಗತಿ ಕಲ್ಪನೆಯಾಗಲಿ ಸಾಂಪ್ರದಾಯಿಕ ಗ್ರೀಕ್ ಭಾವನೆಗೆ ಹೊರತಾದದ್ದು. ಋಗ್ವೇದದ ನಾಸದೀಯ ಸೂಕ್ತದಲ್ಲಿರುವಂತೆಯೇ ಬ್ರಹ್ಮಾಂಡದ ಕಲ್ಪನೆ ಆರ್ಫಿಯನ್ ಧರ್ಮದಲ್ಲಿಯೂ ಇದೆ.

> ಕ್ರಿಸ್ತಶಕದ ಹಲವು ಶತಮಾನಗಳ ಹಿಂದಿನಿಂದಲೂ ಮತ್ತು ಅನಂತರವೂ ಪೌರಸ್ತ್ಯ (ಹಿಂದೂ–ಬೌದ್ಧ) ತಾತ್ತ್ವಿಕ ಮತ್ತು ಧಾರ್ಮಿಕ ಚಿಂತನೆಗಳು ಮಧ್ಯಪೂರ್ವ ಸಂಸ್ಕೃತಿಯ ಪರದೆಯ ಮೂಲಕ ಹರಿದು ಬಂದು ಗ್ರೀಕ್–ಕ್ರೈಸ್ತ ನಾಗರಿಕತೆಯ ಮೇಲೆ ಪ್ರಭಾವವನ್ನು ಬೀರಿವೆ.
>
> *—ವಿನ್‌ಸ್ಟನ್ ಕಿಂಗ್ (Winston King)*

ಮುಂದೆ ಗ್ರೀಕ್ ತಾತ್ತ್ವಿಕರು ಆರ್ಫಿಕ್ ದೈವವಾದವನ್ನು ಸಂಶೋಧಿಸಿದಾಗ ದೊರಕಿದ ಆರ್ಫಿಕ್ ಶ್ಲೋಕಗಳು ಕೆತ್ತಲ್ಪಟ್ಟ ಚಿನ್ನದ ತಗಡುಗಳು ದೊರಕಿದವು. ಅವನ್ನು ಪತ್ತೆಹಚ್ಚಿದ ಪ್ರೊ. ಬರ್ನೆಟ್ ಹೇಳುವಂತೆ, ಅವುಗಳಲ್ಲಿ "ಆಗಿನ ಕಾಲದಲ್ಲಿ ಭಾರತದಲ್ಲಿದ್ದ ನಂಬಿಕೆಗಳಿಗೂ ಆರ್ಫಿಯನ್ ನಂಬಿಕೆಗಳಿಗೂ ಸಾಮ್ಯ ಧಾರಾಳವಾಗಿರುವುದನ್ನು ಕಾಣಬಹುದು." ಉದಾಹರಣೆಗೆ ಪುನರ್ಜನ್ಮ, ಆತ್ಮನ ಅಮರತ್ವ ಹಾಗೂ ದೈವಿಕ ಗುಣಗಳು, ದೇಹದಲ್ಲಿ ಬಂಧಿತವಾದ ಆತ್ಮವನ್ನು ತಪಸ್ಸಿನಿಂದ, ಶುದ್ಧೀಕರಣದಿಂದ ಮುಕ್ತಗೊಳಿಸುವುದು, ಬ್ರಹ್ಮಾಂಡದ ಕಲ್ಪನೆ, ಹುಟ್ಟು-ಸಾವುಗಳ ಚಕ್ರ ಇತ್ಯಾದಿಗಳನ್ನು ಹೆಸರಿಸಬಹುದು.

ಆರ್ಫಿಯನ್ ಸಂಹಿತೆಯನ್ನೇ ಬಳಸುವ ಎಲ್ಯೂಸಿನಿಯನ್ ಪಂಥದಲ್ಲಿ ತಪಸ್ಸು ನೈತಿಕತೆಗಳಿಗಿಂತ ಕರ್ಮಕ್ಕೆ, ಮಾಂತ್ರಿಕತೆಗೆ ಪ್ರಾಮುಖ್ಯ ಹೆಚ್ಚು. ಈ ಪಂಥದ ಪ್ರಕಾರ ಮನುಷ್ಯನಲ್ಲಿರುವ ದೈವಿಕತೆಯನ್ನು ಸುತ್ತಿರುವ ಕಾಳಕತ್ತಲೆಯ ವಲಯಗಳನ್ನು ನಾವು ಅನಾವರಣಗೊಳಿಸಬೇಕು; ಈ ಕ್ರಿಯೆಯಲ್ಲಿ ಮಂತ್ರದೀಕ್ಷೆಯ ಪಾತ್ರ ದೊಡ್ಡದು. ದೀಕ್ಷಿತನನ್ನು ದ್ವಿಜನೆನ್ನಬಹುದು—ಭೌತಿಕ ಹುಟ್ಟು ಮೊದಲನೆಯದಾದರೆ, ಒಳಗೆ ಹುದುಗಿರುವ ಸತ್ಯದ ಅರಿವು ಮಂತ್ರದೀಕ್ಷೆಯ ಮೂಲಕ ಬರುವುದನ್ನು ಎರಡನೆಯ ಹುಟ್ಟೆನ್ನಬಹುದು. ಆತ್ಮನೊಂದಿಗೆ ಒಂದಾಗಲು ಹಾತೊರೆಯುವುದೇ ನಿಜವಾದ ಧರ್ಮ. ಮಂತ್ರದೀಕ್ಷೆಯ ಕೊನೆಯಲ್ಲಿ "ಶಾಂತಿಯನ್ನೈದು" ಎನ್ನುವರು (ನಮ್ಮ ಓಂ ಶಾಂತಿಃ ಶಾಂತಿಃ ಶಾಂತಿಃ ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು). ಅರಿಸ್ಟಾಟಲ್ ಹೇಳುವಂತೆ, "ದೀಕ್ಷೆ ಪಡೆದವರು ಕಲಿಯಬೇಕಾದ್ದೇನೂ ಇಲ್ಲ. ಬದಲಿಗೆ ಅವರು ಸರಿಯಾದ ಮನಃಸ್ಥಿತಿಯನ್ನು ಪಡೆಯುವರು." ಅಲೆಕ್ಸಾಂಡರ್, ಜೂಲಿಯಸ್ ಸೀಸರ್ ಅಂಥವರೂ ಹೀಗೆ ದೀಕ್ಷೆ ಪಡೆದವರೇ. ದೇವರೆಂದರೆ ವಾಗರ್ಥಗಳಲ್ಲ, ಕಲ್ಪನೆಯಲ್ಲ; ದೇಹದಲ್ಲಿರುವಾಗಲೇ ಪಡೆದುಕೊಳ್ಳಬಹುದಾದ ಒಂದು ಪ್ರಜ್ಞಾಸ್ಥಿತಿ. ಧರ್ಮವೆಂದರೆ ಕೇವಲ ಇಷ್ಟದೇವತೆಯ ಉಪಾಸನೆ ಮಾತ್ರವಲ್ಲ. "ಬದುಕೇ ಸಾವೋ, ಸಾವೇ ಬದುಕೋ ಯಾರು ಬಲ್ಲರು?" ಎಂದು ಉದ್ಗಾರವೆತ್ತಿದ ಯೂರಿಪಿಡಿಸ್, ಸೋಫೋಕ್ಲಿಸ್ ಮೊದಲಾದ 'ದುರಂತ' ಕವಿಗಳು ಈ ಪಂಥದ ಅನುಯಾಯಿಗಳಾಗಿದ್ದರು.

ಕ್ರಿ.ಪೂ. ಆರನೆಯ ಶತಮಾನದಲ್ಲಿದ್ದ ಪೈಥಾಗೊರಸ್‌ನ ಬೋಧನೆಗಳಿಗೂ ಈ ಪಂಥಗಳಿಗೂ ಸಾಮ್ಯವಿದೆ. ಆರ್ಫಿಯಸ್ ಅವನ ಪರಮಗುರು. ಸಂಗೀತದಲ್ಲಿ ಮಾಡಿದ ಪ್ರಯೋಗಗಳ ಮೂಲಕ ಅರಿತ ಪ್ರಮಾಣ-ಅನುಪಾತಗಳನ್ನು ಆಧರಿಸಿ ಗಣಿತಶಾಸ್ತ್ರಕ್ಕೆ ಅಸ್ತಿಭಾರ ಹಾಕಿದವನು ಅವನು. ಅವನ ಪ್ರಕಾರ ವಿಶ್ವವೇ ಒಂದು ಸಂಗೀತ ಸಾಮರಸ್ಯ, ಯೋಗ್ಯ ಪ್ರಮಾಣ-ಅನುಪಾತಗಳ ಒಂದು ಸುವ್ಯವಸ್ಥೆ. ಮನುಷ್ಯನ ಆತ್ಮವೂ ಈ ಸಾಮರಸ್ಯವನ್ನು, ಸುವ್ಯವಸ್ಥೆಯನ್ನು ಹೊಂದಲು ಯತ್ನಿಸಬೇಕು. ಜನ್ಮಾಂತರಗಳು ಮಾನವನ ಉನ್ನತಿಗೆ ಕಾರಣವಾಗುವ ಮೆಟ್ಟಿಲುಗಳು. ವಿಜ್ಞಾನಿಯೂ ಆಗಿದ್ದ ಅವನು, ಅರಿಸ್ಟಾಟಲ್ ಹೇಳುವಂತೆ "ಮೊದಲು ಗಣಿತದ ಸಂಖ್ಯೆಗಳಲ್ಲೇ ಮುಳುಗಿದ್ದರೂ", ಪ್ಲೇಟೋ ತನ್ನ ರಿಪಬ್ಲಿಕ್‌ನಲ್ಲಿ ಹೇಳುವಂತೆ "ಒಂದು ಜೀವನಧರ್ಮ ಯೋಗ"ವನ್ನು ಬೋಧಿಸುವ ಮೂಲಕ ತನ್ನ ಅನುಯಾಯಿಗಳ ಪ್ರೀತಿಯನ್ನು ಸಂಪಾದಿಸಿಕೊಂಡಿದ್ದನು.

ಎರಡು ಶತಮಾನ ಕಾಲ ಮುಂದುವರೆದ ಈ ಪೈಥಾಗೊರಿಯನ್ ಜೀವನಕ್ರಮದಲ್ಲಿ ಮೌನಕ್ಕೆ ತುಂಬ ಮಹತ್ವ; ಅದರ ಮೂಲಕವೇ ಸತ್ಯದ ಸಾಕ್ಷಾತ್ಕಾರ. ಭಗವತ್ ಸತ್ಯದ ಮೇಲೆ ಧ್ಯಾನ ಮಾಡುವುದೊಂದೇ ಮಾನವನ ಸ್ವಭಾವಕ್ಕೆ ಹೊಂದಿಕೆಯಾಗುವಂಥ ಅಂತಿಮ ಗುರಿ. ಇದನ್ನು ಸಾಧಿಸಿದವನಿಗೆ ಪುನರ್ಜನ್ಮವಿಲ್ಲ. ಉಪನಿಷತ್ತಿನ ಋಷಿಗಳಂತೆ ಪೈಥಾಗೊರಸನೂ ಆತ್ಮಗಳಲ್ಲಿ ಭೇದವಿಲ್ಲ, ಹೊರಗೆ ತೋರುವ ಮಾನವ-ಮಾನವರ

> ಪೈಥಾಗೊರಿಯನರ ಮತ್ತು ಆರ್ಫಿಕರ ಮೂಲಕ ಪ್ಲೇಟೊ ಹಿಂದೂ ಚಿಂತನೆಯ ಪ್ರಭಾವಕ್ಕೆ ಒಳಗಾಗಿದ್ದನು. ಆದರೆ ಅದು ಭಾರತದಿಂದ ಬಂದಿದೆ ಎಂಬುದು ಅವನಿಗೆ ಗೊತ್ತಿಲ್ಲದೆ ಇರಬಹುದು.
> —ಟಿಮಥಿ ಜೆ. ಲಾಂಪೆರಿಸ್ (Timothy J. Lomperis)

ಹಾಗೂ ಮಾನವ-ಪ್ರಾಣಿಗಳ ನಡುವಣ ವ್ಯತ್ಯಾಸ ಚಿರಂತನವಲ್ಲ ಎಂದು ಅಭಿಪ್ರಾಯ ಪಟ್ಟಿರುವನು. ಬ್ರಹ್ಮಾಂಡದ ಕಲ್ಪನೆಯನ್ನು ಗಣಿತಶಾಸ್ತ್ರೀಯವಾಗಿ ಕೊಟ್ಟಿದ್ದರೂ, ಪೈಥಾಗೊರಸನಲ್ಲಿ ನಾವು ಪ್ರಖರ ಬೌದ್ಧಿಕತೆಯ ಹಾಗೂ ಅದ್ಭುತ ಆಧ್ಯಾತ್ಮಿಕ ಅಂತರ್ದೃಷ್ಟಿಯ ಅಪರೂಪದ ಸಮ್ಮಿಳನವನ್ನು ಕಾಣಬಹುದು. ಅವನು ತುಂಬ ಪ್ರವಾಸ ಮಾಡುತ್ತಿದ್ದನೆಂದೂ, ಈಜಿಪ್ಷಿಯನ್ನರ, ಅಸ್ಸೀರಿಯನ್ನರ ಹಾಗೂ ಬ್ರಾಹ್ಮಣರ ಬೋಧನೆಗಳನ್ನು ಅರಿತಿದ್ದನೆಂದೂ ಅವನ ಜೀವನಚರಿತ್ರಕಾರ ಇಯಾಂಬ್ಲಿಕಸ್ ಹೇಳುತ್ತಾನೆ. ಇದರಲ್ಲಿ ಭಾರತದ ಪ್ರಭಾವವೇ ಹೆಚ್ಚೆಂದೂ, ಪೈಥಾಗೊರಸನ ಧಾರ್ಮಿಕ, ತಾತ್ತ್ವಿಕ ಹಾಗೂ ಗಣಿತಶಾಸ್ತ್ರೀಯ (ಪೈಥಾಗೊರಸ್ ಪ್ರಮೇಯವೂ ಸೇರಿದಂತೆ) ಬೋಧನೆಗಳೆಲ್ಲವೂ ಅವನ ಕಾಲಕ್ಕಿಂತ ಮೊದಲೇ—ಎಂದರೆ ವೇದಗಳ ಕಾಲದಲ್ಲಿ ಭಾರತೀಯರಿಗೆ ತಿಳಿದಿದ್ದವು ಎಂದೂ ಬಹುಜನ ಪಾಶ್ಚಾತ್ಯ ಪಂಡಿತರು ಅಭಿಪ್ರಾಯ ಪಡುತ್ತಾರೆ (ಉದಾಹರಣೆಗೆ, ಪ್ರೊ. ಎಚ್.ಜಿ. ರಾಲಿಂಸನ್‌ರ *Legacy of India*, p.5).

ಕ್ರಿ.ಪೂ. ಐದನೆಯ ಶತಮಾನದಲ್ಲಿದ್ದ ಸಾಕ್ರಟೀಸನು ವೈಚಾರಿಕನೂ ವೈಯಕ್ತಿಕ ಶಿಸ್ತುಳ್ಳವನೂ ತುಂಬ ಧಾರ್ಮಿಕ ವ್ಯಕ್ತಿಯೂ ಆಗಿದ್ದನು. ಆಗಾಗ್ಗೆ ಆಳವಾದ ಧ್ಯಾನದಲ್ಲಿ ಮುಳುಗುತ್ತಿದ್ದ ಅವನು, ಕೆಲವೊಮ್ಮೆ ತನ್ನ ಅಂತರ್ವಾಣಿಯನ್ನು ಆಲಿಸಿ ತಾನೇ ಹಾಕಿ ಕೊಂಡಿದ್ದ ಕಾರ್ಯಕ್ರಮವನ್ನು ಬಿಟ್ಟುಬಿಡುತ್ತಿದ್ದನು. ಅವನ ಪಾಲಿಗೆ ಧರ್ಮವು ಗ್ರೀಕರ ಕರ್ಮನಿಷ್ಠೆಯ ಧರ್ಮಕ್ಕಿಂತ ಭಿನ್ನವಾಗಿತ್ತು. ತಾನು ಬೇರೆಯೇ ಪ್ರಪಂಚದವನು ಎಂದು ತಿಳಿದಿದ್ದ ಅವನು ತನಗೆ ಮರ್ತ್ಯಲೋಕದ ಸಾವು ಏನೂ ಮಾಡದು ಎನ್ನುತ್ತಿದ್ದನು. ಆತ್ಮ ಅಮರವೆಂದೂ ಸುಖ ಎಂದರೆ ಪ್ರಪಂಚವನ್ನು ತ್ಯಾಗ ಮಾಡುವ ಮೂಲಕ ಆತ್ಮನ ಈ ಅಮರತ್ವವನ್ನು ಪಡೆಯುವುದೆಂದೂ, ವಿವಿಧ ಪರಿಸ್ಥಿತಿಗಳಲ್ಲಿದ್ದರೂ ಮಾನವರೆಲ್ಲರೂ ಸಹೋದರರೆಂದೂ ಆತನ ನಂಬಿಕೆಯಾಗಿತ್ತು.

ಗ್ರೀಕ್ ಅನುಭಾವಿ ಸಂಪ್ರದಾಯವು ಪೂರ್ಣವಾಗಿ ಅಭಿವ್ಯಕ್ತಗೊಂಡದ್ದು ಪ್ಲೇಟೋವಿನಲ್ಲಿ (ಕ್ರಿ.ಪೂ. ೪೨೭-೩೪೭). ಇವನು ಗ್ರೀಕ್ ವೈಚಾರಿಕತೆಯ ಮಾರ್ಗವನ್ನು ಅನುಸರಿಸಲಿಲ್ಲ. ಸತ್ಯವನ್ನೆಂದಿಗೂ ವಾದದಿಂದ ಸಾಧಿಸಲಾಗದು. ಅದನ್ನು ಸೂಚಿಸಬಹುದು; ಮೌನವಾಂತ ಮನಸ್ಸು ಅದನ್ನು ಗ್ರಹಿಸಿದರೂ ಗ್ರಹಿಸಬಹುದು. ಅದು ಕೇವಲ ಬೌದ್ಧಿಕವಲ್ಲ; ಮನುಷ್ಯನ ಇಡೀ ಸ್ವಭಾವಕ್ಕೇ ಅನ್ವಯಿಸುವಂಥದು. ಇಂದ್ರಿಯಗಳು ಗ್ರಹಿಸುವ ವಸ್ತುಗಳಿಂದ ಭಿನ್ನವಾದದ್ದು ಬೌದ್ಧಿಕ ಆಕಾರಗಳ ಪ್ರಪಂಚ; ವೈಚಾರಿಕ ಜೀವಕ್ಕಷ್ಟೇ ಅದರ ಪರಿಚಯ ಸಾಧ್ಯ. ಹೀಗೆ ವಾಸ್ತವಿಕತೆ ಎರಡು ತೆರನಾದದ್ದು: ಒಂದು, ಬದಲಾಗದ ಬೌದ್ಧಿಕ ಆಕಾರಗಳು; ಇನ್ನೊಂದು ಯಾವಾಗಲೂ ಬದಲಾಗುತ್ತಿರುವ ಇಂದ್ರಿಯಗ್ರಾಹ್ಯ ವಸ್ತುಗಳು. ಆತ್ಮ ಸರಳವಾದದ್ದು, ಅಮರ ಹಾಗೂ ಅಗ್ರಾಹ್ಯ; ದೇಹ ಸಂಕೀರ್ಣ, ಮರ್ತ್ಯ, ನಶಿಸುವಂಥದು. ಆತ್ಮವು ಇಂದ್ರಿಯಗಳೊಡನೆ ಸೇರಿದಾಗ ನಿರಂತರ ಬದಲಾವಣೆಯ ಪ್ರಪಂಚದಲ್ಲಿ ಕಳೆದುಹೋಗುತ್ತದೆ; ಇಂದ್ರಿಯಗಳಿಂದ ಹಿಮ್ಮೆಟ್ಟುವಂತಾದಾಗ ಶುದ್ಧ, ಚಿರಂತನ, ಬದಲಾಗದ ಪ್ರಪಂಚಕ್ಕೆ ಹಿಂದಿರುಗುತ್ತದೆ.

ಪ್ಲೇಟೋ ತನ್ನ ಪ್ರಸಿದ್ಧ 'ರಿಪಬ್ಲಿಕ್' ಗ್ರಂಥದ ಕೊನೆಯಲ್ಲಿ, ದೇಹ ವಿಸರ್ಜಿತ ಆತ್ಮಗಳು ಆವಶ್ಯಕತೆಯ ಮಗಳಾದ ಲಾಖಿಸಿಸ್‌ಳ ಕೈಯಲ್ಲಿ ತಮ್ಮ ಮುಂದಿನ ಜನ್ಮವನ್ನು ಆರಿಸಿಕೊಳ್ಳುತ್ತವೆ ಎನ್ನುತ್ತಾನೆ. ಇದು ಮೂರ್ತೀಭವಿಸಿದ ಕರ್ಮಫಲ ನಿಯಮವಲ್ಲದೆ ಬೇರೆಯಲ್ಲ. ಮಾನವನ ಆತ್ಮವು ಅನೇಕ ಜನ್ಮಗಳ ಮೂಲಕ ಶುದ್ಧಿಗೊಂಡು ಕೊನೆಗೊಮ್ಮೆ ಹುಟ್ಟು-ಸಾವುಗಳ ಚಕ್ರದಿಂದ ತಪ್ಪಿಸಿಕೊಳ್ಳುತ್ತದೆ. ಪ್ಲೇಟೋನ ಒಂದು ಮುಖ್ಯವಾದ ಚಿಂತನೆ ಎಂದರೆ "ಸಾಮಾನ್ಯ ಮನುಷ್ಯ ಪೂರ್ಣ ಜಾಗೃತನಲ್ಲ; ನಿದ್ದೆಯಲ್ಲಿ ನಡೆಯುವವನಂತೆ ಅವನು ಸಾಹಸಗಳ ಬೆಂಬತ್ತಿ ನಡೆಯುತ್ತಾನೆ ಎಂಬುದು. ಭಾವೋದ್ವೇಗಿಯಾದವನಿಗೆ ಸ್ವಪ್ನಗಳೇ ಸತ್ಯಗಳಾಗಿ ಕಾಣುತ್ತವೆ. ನಿಜವಾದ ಸತ್ಯ ಸಾಕ್ಷಾತ್ಕಾರವಾದಾಗ ರಾತ್ರಿಯ ನೆರಳುಗಳು ಇಲ್ಲವಾಗುತ್ತವೆ; ಇನ್ನೊಬ್ಬ ಸೂರ್ಯನೇ ಉದಯವಾದಂತಾಗಿ, ಚಿಹ್ನೆ-ಪ್ರತಿಮೆಗಳ ಮೂಲಕವಲ್ಲದೆ ನೇರವಾಗಿಯೇ ವಾಸ್ತವಿಕತೆಯನ್ನು ಗ್ರಹಿಸುವ ಶಕ್ತಿ ನಮ್ಮದಾಗುತ್ತದೆ." ಇದು ಹಿಂದೂಗಳ ಮಾಯಾವಾದವನ್ನು ನೆನಪಿಗೆ ತರುತ್ತದೆ ಅಲ್ಲವೆ? ತನ್ನ 'ಫೀಡೋ'ದಲ್ಲಿ (ಪು. ೬) ಪ್ಲೇಟೋ ಹೇಳುತ್ತಾನೆ: "ಯಾವುದರ ಬಗೆಗಿನ ಶುದ್ಧ ಜ್ಞಾನವನ್ನು ಪಡೆಯಬೇಕಾದರೂ ನಾವು ದೇಹದಿಂದ ವಿಮುಕ್ತರಾಗಬೇಕು: ಆತ್ಮವು ತಾನೇ ಸಂಗತಿಗಳ ಒಳಗಿನ ಹೂರಣವನ್ನು ಅರಿಯುವಂತಾಗಬೇಕು; ಆಗ ಮಾತ್ರವೇ ನಾವು ಬಯಸುವ ವಿವೇಕ ನಮ್ಮದಾಗಲು ಸಾಧ್ಯ; ಮೃತ್ಯುವನ್ನು ನಿರೀಕ್ಷಿಸುತ್ತ ಬೆಳಕಿಗೆ ವಿಮುಖವಾಗಿ ನೆರಳುಗಳನ್ನು ವೀಕ್ಷಿಸುತ್ತ ಬದುಕಿರುವವರೆಗೆ ಇದು ಸಾಧ್ಯವಿಲ್ಲ. ವಿವೇಕವನ್ನು ಸಾಧಿಸುವ ಪ್ರಯತ್ನವೆಂದರೆ ಚೈತನ್ಯವನ್ನು ದೇಹದಿಂದ ಬಿಡಿಸಿಕೊಳ್ಳುವುದಲ್ಲದೆ ಬೇರೆಯಲ್ಲ." 'ಫೀಡೋ'ದ ತುಂಬ ಇದೇ ಭಾವನೆಯನ್ನು—ದೇಹವೆಂದರೆ ದೊಡ್ಡದೊಂದು ಅಡ್ಡಿ, ಕೇಡಿನ ಮೂಲ; ಜೀವ ಇದರಿಂದ ಬೇರೆಯಾಗಿ ಶುದ್ಧವಾಗುವ ಪ್ರಯತ್ನ ಮಾಡಬೇಕು ಎಂಬ ಭಾವನೆಯನ್ನು—ಕಾಣಬಹುದು.

ಸಾಂಪ್ರದಾಯಿಕ ಗ್ರೀಕರ ಮುಖ್ಯ ಧೋರಣೆಯೇ ಇಂದ್ರಿಯಗಳಿಗೆ ಹಿತವನ್ನುಂಟುಮಾಡುವ ಎಲ್ಲದರಲ್ಲಿಯೂ ಸುಖವನ್ನರಸುವುದು. ಪ್ರಿಯವಾದುದೂ ಒಳ್ಳೆಯದೂ ಆದ ಇಹದಲ್ಲಿ ಯೋಗ್ಯವಾಗಿ, ಸುಂದರವಾಗಿ ಬದುಕಬೇಕು; ಅದಕ್ಕಾಗಿ

ನಮ್ಮ ದೇಹ ಮನಸ್ಸು ಚೈತನ್ಯಗಳನ್ನು ದುಡಿಸಿಕೊಳ್ಳಬೇಕು. ಆದರೆ 'ಫೀಡೋ'ದಲ್ಲಿನ ಪ್ಲೇಟೋ ನಿಲುವು ಮೇಲ್ನೋಟಕ್ಕೇ ಇದಕ್ಕೆ ವಿರೋಧವಾಗಿದೆ. ಉಪನಿಷತ್ತುಗಳಲ್ಲಿರುವಂತೆಯೇ ಪ್ಲೇಟೋನ ' ರಿಪಬ್ಲಿಕ್'ನಲ್ಲಿ ಉನ್ನತ ದೈವಕಲ್ಪನೆ, ಒಳಿತಿನ ಬಗೆಗಿನ ಕಲ್ಪನೆಗಳಿವೆ; 'ಟಿಮೀಯಸ್'ನಲ್ಲಿ ವಿಶ್ವಾತ್ಮನ ಕಲ್ಪನೆ ಇದೆ. 'ರಿಪಬ್ಲಿಕ್'ನ ಆರನೆಯ ಅಧ್ಯಾಯದಲ್ಲಿ ಮನುಷ್ಯನು ಎಪಿಥೂಮಿಯಾ (ತಮಸ್ಸು–ಅಜ್ಞಾನ, ಕಾಮಾಂಧತೆ), ಥೂಮೋಸ್ (ರಜಸ್ಸು—ಭಾವಾವೇಗ, ಅಧಿಕಾರದಾಹ, ಅರೆಬರೆ ಜ್ಞಾನ) ಮತ್ತು ಲಾಜಿಸ್ಟಿಕಾನ್ (ಸತ್ತ್ವ—ವೈಚಾರಿಕತೆ, ವಿವೇಕ, ಸಮನ್ವಯ, ಆತ್ಮಪ್ರಕಾಶ) ಎಂಬ ಗುಣಗಳನ್ನು ಮೀರಿ, ಪ್ರಪಂಚದ ವ್ಯಕ್ತ ಅಸ್ತಿತ್ವವನ್ನು ಮೀರುವ ಬಗ್ಗೆ ವಿವರಣೆ ಇದೆ. ಈ ಗುಣಗಳ ಆಧಾರದ ಮೇಲೆ ಪ್ಲೇಟೋ ಆತ್ಮಗಳನ್ನು ವಿಭಾಗಿಸುವುದು ಭಾರತದ ವರ್ಣವಿಭಜನೆಯನ್ನೇ ಹೋಲುತ್ತದೆ. ಕ್ರಿ.ಪೂ. ಆರನೆಯ ಶತಮಾನಕ್ಕೆ ಮುಂಚೆಯೇ ಭಾರತದಲ್ಲಿ ಪ್ರಚಲಿತವಿದ್ದ ಈ ಭಾವನೆಗಳು ಗ್ರೀಸ್‌ನಲ್ಲಿ ಅಭಿವ್ಯಕ್ತವಾಗಿರುವುದು ಅನಂತರದಲ್ಲಿ. ತಮ್ಮ ಸಂಪ್ರದಾಯಗಳಲ್ಲಿ ತೃಪ್ತಿಕಾಣದ ಗ್ರೀಕ್ ಬೌದ್ಧಿಕರು, ಸೈನಿಕರ, ವ್ಯಾಪಾರಿಗಳ ರೂಪದಲ್ಲಿ ಬಂದ ಅನ್ಯದೇಶೀಯರಿಂದ ಪ್ರಭಾವಿತರಾಗಿ ಜ್ಞಾನವನ್ನು ಹೆಚ್ಚಿಸಿಕೊಂಡರೆಂದು ಭಾವಿಸುವುದರಲ್ಲಿ ತಪ್ಪೇನೂ ಇಲ್ಲ.

ಪಶ್ಚಿಮ ದೇಶಗಳಲ್ಲಿ ಧರ್ಮಾಂಧತೆ ಬೆಳೆದದ್ದು ಕ್ರೈಸ್ತ ಧರ್ಮವು ಕ್ಯಾಥೊಲಿಕ್ ಚರ್ಚ್ ರೂಪದಲ್ಲಿ ಸಂಘಟಿತವಾದ ಮೇಲೆಯೇ. ಅಲ್ಲಿಯವರೆಗೆ ಮುಕ್ತವಾಗಿ ಜನರು ತಮಗಿಷ್ಟವಾದ ಅನ್ಯದೇಶೀಯ ಧಾರ್ಮಿಕ ಭಾವನೆಗಳನ್ನು ಸ್ವೀಕರಿಸುತ್ತಿದ್ದರು. ಹಿಂದೂಗಳು ಮೊದಲಿನಿಂದಲೂ ಧಾರ್ಮಿಕ ಭಾವನೆಗಳನ್ನು ಹರಡುವುದರಲ್ಲಿ ಮುಂದು. ಜಾವಾ, ಇಂಡೋ ಚೈನಾ, ಮುಂತಾದೆಡೆ ಹಿಂದೂಧರ್ಮ, ಏಷ್ಯಾದ ಬಹುಭಾಗದಲ್ಲಿ ಬೌದ್ಧ ಧರ್ಮ ಹರಡಿದ್ದುದನ್ನು ಗಮನಿಸಿದರೆ ಸಾಂಸ್ಕೃತಿಕವಾಗಿ ಭಾರತೀಯರು ಕಾರ್ಯಪ್ರವರ್ತಕರಾಗಿದ್ದರೆಂಬುದು ಗೊತ್ತಾಗುವುದು. ಪ್ರೊ. ಫ್ಲಿಂಡರ್ಸ್ ಪೆಟ್ರಿ ಹೇಳುವಂತೆ, "ಗ್ರೀಸ್‌ನಲ್ಲಿದ್ದ ಪರ್ಷಿಯನ್ ಸೈನ್ಯದಲ್ಲಿ ಕ್ರಿ.ಪೂ. ೪೮೦ರಲ್ಲೇ ಭಾರತೀಯರು ದೊಡ್ಡ ಸಂಖ್ಯೆಯಲ್ಲಿದ್ದರು. ಮೆಂಫಿಸ್‌ನಲ್ಲಿ ಆ ಕಾಲದ ಭಾರತೀಯ ವ್ಯಾಪಾರಿಗಳ ಅನೇಕ ವಿಗ್ರಹಮಾದರಿಗಳು ದೊರೆತಿವೆ. ಪಾಶ್ಚಾತ್ಯರಲ್ಲಿ ತಪಸ್ವೀ ಜೀವನದ ಆದರ್ಶಕ್ಕೆ ಮೂಲವೇ ಈ ಭಾರತೀಯ ಪ್ರಭಾವವೆಂದು ಪರಿಗಣಿಸಲು ಕಷ್ಟವೇನಿಲ್ಲ" (*Egypt and Israel*, p.134).

ಅರಿಸ್ಟಾಟಲ್‌ನ ಶಿಷ್ಯ ಅರಿಸ್ಟೋಕ್ಸೇನಸ್ (ಕ್ರಿ.ಪೂ.೩೩೦) ಎಂಬ ಸಂಗೀತಗಾರನ ವರ್ಣನೆಯಂತೆ, ಭಾರತೀಯರು ಅಥೆನ್ಸಿನಲ್ಲಿ ಸಾಕ್ರಟೀಸನನ್ನು ಭೇಟಿಯಾಗಿದ್ದರು. ಅವರಲ್ಲೊಬ್ಬ "ನಿಮ್ಮ ತತ್ತ್ವಶಾಸ್ತ್ರದ ವ್ಯಾಪ್ತಿ ಏನು?" ಎಂದು ಕೇಳಲು ಸಾಕ್ರಟೀಸನು "ಮಾನವ ವಿದ್ಯಮಾನವನ್ನು ವಿವೇಚಿಸುವುದು" ಎಂದನಂತೆ. ಅದಕ್ಕೆ ಆ ಭಾರತೀಯ ನಕ್ಕು, "ನಾವು ದಿವ್ಯತೆಯ ವಿದ್ಯಮಾನದ ಬಗ್ಗೆ ಅಜ್ಞಾನಿಗಳಾಗಿರುವಾಗ ಮಾನವ ವಿದ್ಯಮಾನವನ್ನು ಹೇಗೆ ತಾನೆ ವಿವೇಚಿಸಬಲ್ಲೆವು?" ಎಂದನಂತೆ. ಭಾರತೀಯರು ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ಅಥೆನ್ಸ್‌ನಲ್ಲಿ ಇದ್ದುದನ್ನು ಅರಿಸ್ಟಾಟಲನೂ ತನ್ನ ಬರಹಗಳಲ್ಲಿ ಪ್ರಸ್ತಾಪಿಸಿದ್ದಾನೆ. ಹೇಗಾದರಾಗಲಿ, ಗ್ರೀಕ್ ಜನಪ್ರಿಯ ಧರ್ಮಕ್ಕೂ ವೇದಕಾಲದ ಚಿಂತನೆಗೂ ಸಾಮ್ಯವಿದೆ. ಅನುಭಾವೀ ಪಂಥಗಳಾದ ಆರ್ಫಿಯನ್, ಎಲ್ಯೂಸಿನಿಯನ್, ಪೈಥಾಗೊರಿಯನ್-ಪ್ಲೇಟೋ ಚಿಂತನೆ (ಇದೇ ಮುಂದಣ ಗ್ರೀಕ್ ಹಾಗೂ ಕ್ರಿಶ್ಚಿಯನ್ ಚಿಂತನೆಗೆ ಆಧಾರವಾಯಿತು) ಇವುಗಳ ಮುಖ್ಯಾಂಶಗಳು ವೇದಕಾಲಾನಂತರ ಭಾರತೀಯ ಚಿಂತನೆಯನ್ನು ಹೋಲುತ್ತವೆ. ಇವೇ ಮುಂದೆ ಕ್ರೈಸ್ತ ಧರ್ಮದ ಪಾಪಪ್ರಜ್ಞೆ, ಅದರಿಂದ ಉದ್ಧಾರವಾಗಬೇಕಾದ ಆವಶ್ಯಕತೆ, ಸತ್ತ ಮೇಲಣ ಶಿಕ್ಷೆಗಳು, ಸುಖಜೀವನಕ್ಕೆ ರಹದಾರಿಯಾಗಿ ಮಂತ್ರದೀಕ್ಷೆ, ಕರ್ಮಶುದ್ಧಿ ಇತ್ಯಾದಿ ಭಾವನೆಗಳ ಉಗಮಕ್ಕೆ ಕಾರಣವಾದವು.

(ಮುಂದುವರಿಯುವುದು)

ಪರ್ಷಿಯಾದಿಂದ ಚೈನಾ ಸಮುದ್ರದವರೆಗೆ, ಸೈಬೀರಿಯಾದ ನೀರ್ಗಲ್ಲು ಪ್ರದೇಶದಿಂದ ಜಾವಾ ಮತ್ತು ಬೋರ್ನಿಯೋದವರೆಗೆ, ಓಷೀನಿಯಾದಿಂದ ಸೊಕೋತ್ರಾದವರೆಗೆ ಭಾರತವು ತನ್ನ ನಂಬಿಕೆಗಳನ್ನು, ಕಥೆಗಳನ್ನು ಮತ್ತು ನಾಗರಿಕತೆಯನ್ನು ಪ್ರಸಾರಗೊಳಿಸಿತು. ಹಲವು ಶತಮಾನಗಳ ಸುದೀರ್ಘ ಅವಧಿಯಲ್ಲಿ ಮಾನವ ಜನಾಂಗದ ಕಾಲುಭಾಗದ ಮೇಲೆ ಭಾರತವು ಅಚ್ಚಳಿಯದ ಪ್ರಭಾವವನ್ನು ಬೀರಿದೆ. ವಿಶ್ವ ಇತಿಹಾಸದಲ್ಲಿ ಅಜ್ಞಾನದಿಂದಾಗಿ ಅದಕ್ಕೆ ನಿರಾಕರಿಸಲ್ಪಟ್ಟ ಘನತೆಯನ್ನು ತನ್ನದನ್ನಾಗಿ ಮಾಡಿಕೊಳ್ಳುವ, ಶ್ರೇಷ್ಠ ರಾಷ್ಟ್ರಗಳ ಪೈಕಿ ಮಾನವೀಯ ಭಾವದ ಸಾರತತ್ತ್ವವಾಗಿ ಮತ್ತು ಸಂಕೇತವಾಗಿ ಹೆಮ್ಮೆಯಿಂದ ತಲೆ ಎತ್ತಿ ನಿಲ್ಲುವ ಹಕ್ಕು ಅದಕ್ಕಿದೆ. —ಸಿಲ್ವೈನ್ ಲೆವಿ (Sylvain Levi)

## ಆಶ್ರಮದ ಕಾರ್ಯಕ್ರಮಗಳು

### ನವೆಂಬರ್ 2004

| | | |
|---|---|---|
| ಏಕಾದಶಿ | 8 | ಸೋಮವಾರ |
| ಶ್ರೀ ಶ್ರೀ ಕಾಳೀ ಪೂಜಾ | 11 | ಗುರುವಾರ |
| ಏಕಾದಶಿ | 22 | ಸೋಮವಾರ |
| ಸ್ವಾಮಿ ಸುಬೋಧಾನಂದ ಜಯಂತಿ | 23 | ಮಂಗಳವಾರ |
| ಸ್ವಾಮಿ ವಿಜ್ಞಾನಾನಂದ ಜಯಂತಿ | 25 | ಗುರುವಾರ |

ಪ್ರಾಯೋಜಕರು : Diesel (India ), No.2, Lalbagh Fort Road, Bangalore - 560 004